| ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಚಿಂತಾಮಣಿ | | | |
|---|---|---|---|
| ಸಿಸಿ ನಂ. 299/2017 | | | |
| ಸಾಕ್ಷಿದಾರರ ಹೆಸರು | ವೇಮಣ್ಣ | | |
| ತಂದೆ /ಗಂಡನ ಹೆಸರು | ವೆಂಕಟರಾಯಪ್ಪ | ಪಿಡಬ್ಲ್ಯೂ | 10 |
| ವಯಸ್ಸು | 56 ವರ್ಷ | ಸಿಡಬ್ಲ್ಯೂ | 10 |
| ಉದ್ಯೋಗ | ಪೀಲ್ಡ ವರ್ಕ್ | ಪ್ರಮಾಣ ವಚನ | |
| ವಾಸ ಸ್ಥಳ | ಮಾಳಪ್ಪಲ್ಲಿ | ಭೋದಿಸಿದ ದಿನಾಂಕ | 18-04-2024 |

ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅ. ರವರಿಂದಃ

ಈಗ ತೋರಿಸುತ್ತಿರುವ ನಿಪಿ-6 ದಾಖಲೆಯಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ಈಗ ಸುಮಾರು 8 ವರ್ಷಗಳ ಹಿಂದೆ ನಾನು ದಾರಿಯಲ್ಲಿ ಹೋಗುತ್ತಿದ್ದಾಗ ಪೋಲೀಸ್ ರವರು ಸಹಿ ಪಡೆದಿರುತ್ತಾರೆ. ಸದರಿ ದಾಖಲೆಯಲ್ಲಿ ಏನು ಬರೆದಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ಸಮಕ್ಷಮದಲ್ಲಿ ಯಾವುದೇ ಚೆಕ್ ಗಳನ್ನು ವಶಪಡಿಸಿಕೊಂಡಿರುವುದಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಏನು ಗೊತ್ತಿರುವುದಿಲ್ಲ.

ನಿಪಿ-6 ರಲ್ಲಿನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-6 (ಬಿ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಸ ಅ ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಮಾನ್ಯ ಸ. ಸ. ಅ. ರವರಿಂದಃ

ಸಾಕ್ಷಿಗೆ ನಿಪಿ 6 ರ ಭಾಗವಾದ ದಿಃ 2-12-2015 ರಂದು ಪಿರ್ಯಾದಿದಾರರು ಸೂಲದೇನಹಳ್ಳಿ ಗ್ರಾಮದ ಅಂಜಿನಪ್ಪ ರವರಿಂದ ತೆಗೆದುಕೊಂಡಿರುವ ಚೆಕ್ ಬುಕ್ ಅನ್ನು ಹಾಜರುಪಡಿಸಿದ್ದು ಸದರಿ ಚೆಕ್ ಪುಸ್ತಕಗಳ ಬಗ್ಗೆ ನಿಮ್ಮ ಮತ್ತು ರಾವುಚಂದ್ರರೆಡಿಡ ರರವರ ಸಮಕ್ಷಮ ಸಮಯ 7 ರಿಂದ 8 ಗಂಟೆಯವರೆಗೆ ಪಂಚನಾಮೆಯನ್ನು ಜರುಗಿಸಿ , ಪಂಚನಾಮೆಯ ಕಾಲಕ್ಕೆ ಸುಮಾರು ಚೆಕ್ ಪುಸ್ತಕವನ್ನು ಜಪ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ ಏನೂ ಇಲ್ಲ.

ಮರು ವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.